






ಮನೆಯ ಹೊರ ವಿನ್ಯಾಸ

ಕಿಟಕಿಯಿಂದ ತೂರಿ ಬರುವ ಸಹಜ ಬೆಳಕು



## ಮನೆಯಲ್ಲೇ ಸಾವಯುವ ತರಕಾರಿ

ಮನೆಯ ಮುಂದೆ ಮತ್ತು ತಾರಸಿಯಲ್ಲಿ ಇವರು ತರಕಾರಿ ಬೆಳೆಯುತ್ತಾರೆ. ಹಾಗಲಕಾಯಿ, ಟೊಮ್ಯಾಟೋ, ದಂಟಿನ ಸೊಪ್ಪು, ಕೊತ್ತಂಬರಿ  ಸೊಪ್ಪು, ಬದನೆ ಕಾಯಿ, ಮೂಲಂಗಿ, ಮೆಣಸಿನ ಕಾಯಿ, ಕರಿಬೇವು, ದೊಡ್ಡ ಪತ್ರೆ , ತುಳಸಿಯ ವನವೇ ಇಲ್ಲಿದೆ. 'ಈ ಸಲ 40ರಿಂದ 50 ಕೆಜಿ ಹಾಗಲಕಾಯಿ, 25ರಿಂದ 30 ಕೆ.ಜಿ. ಟೊಮ್ಯಾಟೋ ಬೆಳೆದಿದ್ದೇವೆ' ಎನ್ನುತ್ತಾರೆ ಪ್ರದೀಪ್‌ರ ತಂದೆ ಕೃಷ್ಣಮೂರ್ತಿ. ತೋಟಕ್ಕೆ ಮರುಬಳಕೆಯ ನೀರು, ಬಯೋ ಗ್ಯಾಸ್ ಯಂತ್ರದಿಂದ ಬರುವ ಅರೆ ಘನರೂಪಿ ದ್ರವ ಗೊಬ್ಬರದಂತೆ ಕೆಲಸ ಮಾಡುತ್ತದೆ. 'ಸಾವಯವ ತರಕಾರಿಯನ್ನು ನಾವೂ ತಿನ್ನುತ್ತೇವೆ, ಅಕ್ಕಪಕ್ಕದವರಿಗೂ ಕೊಡುತ್ತೇವೆ. ವೀಳ್ಯದ ಬಳ್ಳಿ, ದಾಸವಾಳ, ಶಾವಂತಿಗೆ, ಪಾರಿಜಾತ, ಮಲ್ಲಿಗೆ, ಗುಲಾಬಿ ಹೂವುಗಳು ದೇವರ ಪೂಜೆಗೆ ಸಾಕಷ್ಟು ಸಿಗುತ್ತಿವೆ' ಎನ್ನುತ್ತಾರೆ ಪ್ರದೀಪ್‌ರ ತಾಯಿ ಪದ್ಮಾ.

ಮನೆಗೆ ಎಲ್ಲೆಡೆ ಎಲ್‌ಇಡಿ ದೀಪಗಳನ್ನು ಹಾಕಿದ್ದಾರೆ. ಸ್ನಾನಕ್ಕೆ ಸೋಲಾರ್ ನೀರು. ಹಾಗಾಗಿ ಮನೆಯ ವಿದ್ಯುತ್ ಬಿಲ್‌ನಲ್ಲಿ ಶೇಕಡಾ 50ರಷ್ಟು ಕಡಿತ ಆಗುತ್ತಿದೆ. 'ನಾವು ನಮ್ಮ ಸಾಂಪ್ರದಾಯಿಕ ಶೈಲಿಯನ್ನು ಮರೆತು, ಪಾಶ್ಚಾತ್ಯ ಶೈಲಿಯನ್ನು ಅನುಕರಿಸುತ್ತಿದ್ದೇವೆ. ಯಾರಿಗೂ ಶ್ರಮ ಪಡುವುದು ಬೇಕಿಲ್ಲ. ನಮ್ಮ ದೇಶದಲ್ಲಿ ಮನೆಗೆ ಪಿಲ್ಲರ್‌ಗಳ ಅಗತ್ಯವೇ ಇಲ್ಲ, ಆದರೂ ಪಿಲ್ಲರ್‌ಗಳನ್ನು ಹಾಕುತ್ತೇವೆ' ಎನ್ನುವುದು ಪ್ರದೀಪ್ ಅವರ ಬೇಸರ.

'ಮೂಲಭೂತ ತತ್ವಗಳು ಮತ್ತು ಪರಿಕಲ್ಪನೆಗಳು ಒಂದೇ ಆಗಿದ್ದರೂ ಆಲೋಚನೆಗಳು ಬದಲಾಗಿವೆ. ನಮ್ಮದು **KISS** ತತ್ವ. ಅಂದರೆ **keep it simple and start.** ಮಾಡುವ ಮನಸ್ಸಿದ್ದರೆ ಯಾವುದೂ ಕಷ್ಟವಲ್ಲ. ನಾನು ಚಿಕ್ಕವನಿದ್ದಾಗ  ನಮ್ಮ ತಂದೆಯದು ವರ್ಗಾವಣೆ ಆಗುತ್ತಿದ್ದ ಕೆಲಸ. ಅಲ್ಲೆಲ್ಲಾ ಸಣ್ಣ ಊರುಗಳಲ್ಲಿ ಮನೆಯ ಮುಂದೆ ದೊಡ್ಡ ತೋಟಕ್ಕೆ ಸ್ಥಳವಿರುತ್ತಿತ್ತು. ಅವರು ಗಿಡಗಳನ್ನು ಬೆಳೆಸುತ್ತಿದ್ದುದು ನಾನು ನೋಡುತ್ತಿದ್ದೆ. ಅದೇ ನನಗೆ ಪ್ರೇರಣೆ. ನಾನು ಈ ರೀತಿಯ ಮನೆ ಕಟ್ಟಿಸುತ್ತೇನೆ ಎಂದಾಗ ಮೊದಲು ಎಲ್ಲರೂ ವಿರೋಧಿಸಿದರು. ಆದರೆ ನಂತರ ಎಲ್ಲರೂ ಸಹಕಾರ ಕೊಟ್ಟರು. ನನ್ನ ಪತ್ನಿ ಅಶ್ವಿನಿಯ  ಸಹಕಾರ ದೊಡ್ಡದು. ಮನೆಗೆ ಬಂದವರಿಗೆಲ್ಲಾ ನಮ್ಮ ಐದು ವರ್ಷದ ಮಗನೇ ಈ ಪರಿಕಲ್ಪನೆಯ ಬಗ್ಗೆ ವಿವರಿಸಿ ಹೇಳುತ್ತಾನೆ' ಎಂದು ನಗುತ್ತಾರೆ ಪ್ರದೀಪ್.